operated by making up the shortage of staff. However, until such time the required staff is deployed, the number of intensified checks involving Officers are being increased to effectively control leakage of revenue. Regarding privatisation of public transport in Karnataka, proposals are before the Government for its consideration.

ವಿಷಯ:- ಚಿಕ್ಕಮಗಳೂರು ಜಿಲ್ಲೆಯಲ್ಲಿ ರೋಡ್ ರೋಲರ್‌ಗಳನ್ನು ಪ್ರತಿ ತಾಲ್ಲೂಕಿಗೆ ಒದಗಿಸದೇ ಇರುವ ಬಗ್ಗೆ.

ಶ್ರಿ ಯು. ಕೆ. ಶಾಮಣ್ಣ (ಶೃಂಗೇರಿ):- ಮಾನ್ಯ ಅಧ್ಯಕ್ಷರೇ, ಚಿಕ್ಕಮಗಳೂರು ಜಿಲ್ಲಾ ಪರಿಷತ್ತಿನ ಇಂಜಿನಿಯರಿಂಗ್ ವಿಭಾಗದಲ್ಲಿ ಒಟ್ಟು ಎಷ್ಟು ರೋಡ್ ರೋಲರ್‌ಗಳಿವೆ ತಿಳಿಸಿ. ಪ್ರತಿ ತಾಲ್ಲೂಕ್‌ಗೆ ಸಮನಾಗಿ ಹಂಚಿದೆಯೇ? ಅವುಗಳಲ್ಲಿ ಕೆಲಸಕ್ಕೆ ಯೋಗ್ಯವಾಗದಿರುವುದು ಎಷ್ಟು? ಅದು ಕಡಿಮೆಯಾಗಿ ಕೆಲಸ ಕುಂಠಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಸರ್ಕಾರ ಏನಾದರೂ ಅಭಿವೃದ್ಧಿ ಮಾಡುವುದಕ್ಕೆ ಕ್ರಮ ಕೈಗೊಂಡಿದೆಯೇ?

ಛೇರ್ಮನ್:- ಗ್ರಾಮೀಣಾಭಿವೃದ್ಧಿ ಮಂತ್ರಿಗಳ ಪರವಾಗಿ ಯಾರಾದರೂ ಮಂತ್ರಿಗಳು ಇದಕ್ಕೆ ಉತ್ತರ ಕೊಡುತ್ತೀರಾ?

ಶ್ರಿ ಮಲ್ಲಾರಿಗೌಡ. ಎಸ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು):- ಮಾನ್ಯ ಅಧ್ಯಕ್ಷರೇ, ಗ್ರಾಮೀಣಾಭಿವೃದ್ಧಿ ಮಂತ್ರಿಗಳ ಗಮನಕ್ಕೆ ಇದನ್ನು ತಂದು ಅವರಿಗೆ ಉತ್ತರ ಒದಗಿಸುತ್ತೇವೆ.

ಶ್ರಿಮತಿ ಸುಮಾ ವಸಂತ - (ಹಾಜರಿರಲಿಲ್ಲ)

ಶ್ರಿ ಶಿವಾನಂದ. ಹೆಚ್. ಕೌಜಲಗಿ - (ಹಾಜರಿರಲಿಲ್ಲ)

ವಿಷಯ:- ಮಾಗಡಿ ತಾಲ್ಲೂಕಿನಲ್ಲಿ ದನಕರುಗಳಿಗೆ "ಕಾಲು ಬಾಯಿ ಜ್ವರ" ತಗುಲಿರುವ ಬಗ್ಗೆ.

ಶ್ರಿ ಹೆಚ್. ಎಂ. ರೇವಣ್ಣ (ಮಾಗಡಿ):- ಮಾಗಡಿ ತಾಲ್ಲೂಕಿನಲ್ಲಿ ದನಕರುಗಳಿಗೆ "ಕಾಲು ಬಾಯಿ ಜ್ವರ" ಅಂಟುರೋಗ ತಗುಲಿ ಬಹಳರಾಸುಗಳಿಗೆ ತೊಂದರೆಯಾಗಿದೆ. ಸಂಬಂಧಪಟ್ಟ ಇಲಾಖೆಯಲ್ಲಿ ವಿಚಾರಿಸಲಾಗಿ ಹಾಲು ಉತ್ಪಾದನಾ ಸಂಘದಿಂದ ಸಾಲ ಪಡೆದ ರೈತರಿಗೆ ಮಾತ್ರ ಲಸಿಕೆಯು ಲಭ್ಯವಿದ್ದು ಇತರೆ ಬಡರೈತರಿಗೆ ಬಹಳ ತೊಂದರೆಯಾಗಿದೆ. ಆದ್ದರಿಂದ ಪಶುವೈದ್ಯ ಸಚಿವರು ಈ ತೊಂದರೆಯನ್ನು ಜರೂರಾಗಿ ಬಗೆಹರಿಸಬೇಕಾಗಿ ಸೂಚನೆ.

ಶ್ರಿ ಟಿ.ಎಂ.ಮಂಜುನಾಥ (ಸಣ್ಣ ಉಳಿತಾಯ ರಾಜ್ಯ ಮಂತ್ರಿಗಳು):- ಮಾನ್ಯ ಅಧ್ಯಕ್ಷರೇ, ಮಾನ್ಯ ಪಶು ಸಂಗೋಪನೆ ಮತ್ತು ಪಶು ವೈದ್ಯ ಸೇವಾ ರಾಜ್ಯ ಸಚಿವರ ಪರವಾಗಿ ಈ ಕೆಳಕಂಡ ಹೇಳಿಕೆಯನ್ನು ನೀಡುತ್ತೇನೆ. ಮಾಗಡಿ ತಾಲ್ಲೂಕಿನಲ್ಲಿ "ಕಾಲು ಬಾಯಿ ಜ್ವರವು" ಸುಮಾರು 15 ದಿವಸಗಳಿಂದ ಕಾಣಿಸಿಕೊಂಡಿರುತ್ತದೆ. ಸದರಿ ಖಾಯಿಲೆಯಿಂದ ಜಾನುವಾರುಗಳು ಮಾಗಡಿ ತಾಲ್ಲೂಕಿನ ಯಾವುದೇ ಆಸ್ಪತ್ರೆಗಳಲ್ಲಿ ಧಾಖಲಾಗಿರುವುದಿಲ್ಲ ಹಾಗೂ ರೈತರೇ ಬಂದು ಸೂಕ್ತ ಔಷಧಿಗಳನ್ನು ತೆಗೆದುಕೊಂಡು ಹೋಗುತ್ತಿದ್ದಾರೆ. ಆದುದರಿಂದ ಈ ಖಾಯಿಲೆಯಿಂದ ನರಳುತ್ತಿರುವ ಹಾಗೂ ಸತ್ತಿರುವ ಜಾನುವಾರುಗಳ ನಿರ್ಧಿಷ್ಟ ಸಂಖ್ಯೆ ದೊರಿಯುತ್ತಿಲ್ಲ. ಬೆಂಗಳೂರು ಹಾಲು ಒಕ್ಕೂಟವು ಮಾಗಡಿ ತಾಲ್ಲೂಕಿನಲ್ಲಿರುವ ಹಾಲು ಉತ್ಪಾದಕರಿಗೆ ಪಶು ಆರೋಗ್ಯ ರಕ್ಷಣೆ ಸೌಲಭ್ಯವನ್ನು ನೀಡಿರುತ್ತದೆ. ಮುಂಜಾಗ್ರತಾ ಕ್ರಮವಾಗಿ ಕಾಲು ಬಾಯಿ ಜ್ವರವನ್ನು ತಡೆಗಟ್ಟಲು ಹಾಲು ಉತ್ಪಾದಕರ ಸಹಕಾರ ಸಂಘಗಳ ಸದಸ್ಯರುಗಳ ಮಿಶ್ರ ತಳಿ ರಾಸುಗಳಿಗೆ ಮಾತ್ರ ಪ್ರತಿ ಆರು ತಿಂಗಳಿಗೊಮ್ಮೆ ಕಾಲು ಬಾಯಿ ಜ್ವರದ ಲಸಿಕೆಯನ್ನು ಹಾಕಲಾಗುತ್ತಿದೆ. ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಲಿಯವರ ಅಂಗ

ಸಂಸ್ಥೆಯಾದ ಮೆ. ಇಂಡಿಯನ್ ಇಮ್ಯೂನಲಾಜಿಕಲ್ಸ್, ಹೈದರಾಬಾದ್ ಇವರು ತಯಾರಿಸಿದ. "ರಕ್ಷಾ" ಲಸಿಕೆಯನ್ನು ಉಪಯೋಗಿಸಿ ಕಳೆದ ಎರಡು ತಿಂಗಳುಗಳಲ್ಲಿ 24,000 ರಾಸುಗಳಿಗೆ ಲಸಿಕೆ ನೀಡಲಾಗಿದೆ. ನೆಲಮಂಗಲ ಶಿಬಿರ ಕಛೇರಿಯಲ್ಲಿ ವರ್ಷಪೂರ್ತಿ ಸಾಕಷ್ಟು ಪ್ರಮಾಣದ ಕಾಲು ಬಾಯಿ ಜ್ವರದ ಲಸಿಕೆಯನ್ನು ದಾಸ್ತಾನು ಮಾಡಲಾಗಿದೆ. ಪಶುವೈದ್ಯ ಆಸ್ಪತ್ರೆಯ ಸಿಬ್ಬಂದಿ ವರ್ಗದವರಿಂದ ಆಸಕ್ತಿಯುಳ್ಳ ರೈತರ ಜಾನುವಾರುಗಳಿಗೆ ಅವರ ಕೋರಿಕೆಯ ಮೇರೆಗೆ ಅವರು ಖರೀದಿಸಲಾದ ಲಸಿಕೆಯನ್ನು ಹಾಕಲಾಗುತ್ತಿದೆ.

ಮಾಗಡಿ ತಾಲ್ಲೂಕಿನಲ್ಲಿ ಜಾನುವಾರುಗಳ ಸಂಖ್ಯೆ ಈ ಕೆಳಕಂಡಂತೆ ಇದೆ.:-

1.	ದನಗಳು	94,160
2.	ಎಮ್ಮೆಗಳು	15,108
3.	ಕುರಿಗಳು	38,817
4.	ಮೇಕೆಗಳು	39,901

ಮಾಗಡಿ ತಾಲ್ಲೂಕಿನಲ್ಲಿ ಜಾನುವಾರು ಜಾತ್ರೆಗಳು ನಡೆಯಲಿರುವುದರಿಂದ ಮುಂಜಾಗ್ರತಾ ಕ್ರಮವಾಗಿ ಎಲ್ಲಾ ಜಾನುವಾರುಗಳಿಗೂ ಕಾಲು ಬಾಯಿ ಜ್ವರದ ಲಸಿಕೆಯನು ಉಚಿತವಾಗಿ ಇಲಾಖೆಯಿಂದ ನೀಡಲು ಮಾನ್ಯ ಸದಸ್ಯರು ತಿಳಿಸಿರುವ ಮೇರೆಗೆ ತಿಳಿಸುವುದೇನೆಂದರೆ ಕಾಲು ಬಾಯಿ ಜ್ವರದ ಲಸಿಕೆಯು ರಾಜ್ಯದ ಸರ್ಕಾರಿ ಸ್ವಾಮ್ಯದ ಲಸಿಕೆ ಉತ್ಪಾದನಾ ಕೇಂದ್ರ (ಪ್ರಾಣಿ ಆರೋಗ್ಯ ಮತ್ತು ಜೈವಿಕ ಸಂಸ್ಥೆ, ಹೆಬ್ಬಾಳ) ಬೆಂಗಳೂರು ಇಲ್ಲಿ ಉತ್ಪಾದನೆ ಮಾಡುತ್ತಿಲ್ಲವಾದ ಕಾರಣ ಈ ಲಸಿಕೆಯನ್ನು ಉಚಿತವಾಗಿ ಜಾನುವಾರುಗಳಿಗೆ ಪಶುವೈದ್ಯ ಶಾಲೆಗಳಿಂದ ಚುಚ್ಚುಮದ್ದು ಹಾಕಲು ಸರಬರಾಜು ಮಾಡುತಿಲ್ಲ. ಈ ಲಸಿಕೆಯನ್ನು ಖಾಸಗೀ ವಲಯದವರು ಉತ್ಪಾದಿಸುತ್ತಿದ್ದು, ಇದನ್ನು ಖರೀದಿಸಿ ಸರಬರಾಜು ಮಾಡಬೇಕಾಗುತ್ತದೆ. ಈ ಲಸಿಕೆ ಖರೀದಿ ಹಾಗೂ ಸರಬರಾಜಿಗಾಗಿ ಆಯವ್ಯಯದಲ್ಲಿ ಪ್ರತ್ಯೇಕವಾಗಿ ಹಣ ನಿಗಧಿಪಡಿಸಿರುವುದಿಲ್ಲ. ಈ ಲಸಿಕೆಯನ್ನು ವರ್ಷಕ್ಕೆ ಎರಡುಬಾರಿ, ಜಾನುವಾರುಗಳ ಸಂಖ್ಯೆಯ ಕನಿಷ್ಟ 80ರಷ್ಟು ಜಾನುವಾರುಗಳಿಗೆ ಚುಚ್ಚುಮದ್ದು ನೀಡಬೇಕಾಗಿರುವುದರಿಂದ ಇದು ಸರ್ಕಾರಕ್ಕೆ ಹೆಚ್ಚಿನ ಆರ್ಥಿಕ ಹೊರೆಯಾಗಿರುತ್ತದೆ. ಇದರಂತೆ ಮಾಗಡಿ ತಾಲ್ಲೂಕಿನ ಜಾನುವಾರುಗಳಿಗೆ ಚುಚ್ಚುಮದ್ದನ್ನು ಉಚಿತವಾಗಿ ನೀಡಲು ಪ್ರತಿವರ್ಷ ಅಂದಾಜು ರೂ.10.10 ಲಕ್ಷಗಳು ವೆಚ್ಚವಾಗುವುದರಿಂದ ಈ ಚುಚ್ಚುಮದ್ದನ್ನು ಉಚಿತವಾಗಿ ನೀಡಲು ಸಾಧ್ಯವಿಲ್ಲ.

ವಿಷಯ: ಮಂಗಳೂರಿನ ಬೆಂಗ್ರಿ (ದಕ್ಷಿಣ ಮತ್ತು ಉತ್ತರ) ಪ್ರದೇಶಗಳನ್ನು ಮಂಗಳೂರು ಮಹಾನಗರ ಪಾಲಿಕೆಗೆ ಸೇರಿಸುವ ಬಗ್ಗೆ.

ಶ್ರೀ ಬಿ.ಎಂ.ಇದಿನಬ್ಬ (ಉಳ್ಳಾಲ):- ಮಾನ್ಯ ಅಧ್ಯಕ್ಷರೇ, ಮಂಗಳೂರಿನ ಬೆಂಗ್ರಿ ದಕ್ಷಿಣ ಮತ್ತು ಬೆಂಗ್ರಿ ಉತ್ತರ ಪ್ರದೇಶದಲ್ಲಿ ಸುಮಾರು 10 ಸಾವಿರಕ್ಕೂ ಮಿಕ್ಕಿ ಜನರಿದ್ದಾರೆ. ಆದರೆ ಇವರಿಗೆ ಜಿಲ್ಲಾ ಪರಿಷತ್ತಿನ ಅಥವಾ ಮಂಡಲ ಪಂಚಾಯತಿನ ವ್ಯವಸ್ಥೆ ಇಲ್ಲ. ಮಂಗಳೂರು ಮಹಾನಗರ ಪಾಲಿಕೆಯಲ್ಲೂ ಅವರಿಗೆ ಅವಕಾಶವಿಲ್ಲ. ಇದರಿಂದಾಗಿ ಇಲ್ಲಿಯ ಜನರು ತ್ರಿಶಂಕು ಸ್ಥಿತಿಯಲ್ಲಿದ್ದಾರೆ. ಯಾವ ಅಭಿವೃದ್ಧಿಯ ಕೆಲಸಗಳೂ ಇಲ್ಲಿ ಆಗುವುದಕ್ಕೆ ಅವಕಾಶವಿಲ್ಲ. ಕೆಲವು ವರ್ಷಗಳ ಹಿಂದೆ ಈ ಪ್ರದೇಶವನ್ನು ಮಂಗಳೂರು ಮಹಾಪಾಲಿಕೆಯಲ್ಲಿ ಸೇರಿಸಬೇಕೆಂದು ಮನವಿ ಮಾಡಿಕೊಂಡಾಗ ಆ ಬಗ್ಗೆ ವ್ಯವಸ್ಥೆ ಮಾಡಲಾಗುವುದೆಂದು ಹೇಳಲಾಗಿತ್ತು. ಆದರೆ ಈವರೆಗೂ ಯಾವ ವ್ಯವಸ್ಥೆಯೂ ಆಗಿಲ್ಲ. ಆದಕಾರಣ ಬೆಂಗ್ರಿ ದಕ್ಷಿಣ ಮತ್ತು ಬೆಂಗ್ರಿ ಉತ್ತರ ಈ ಪ್ರದೇಶಗಳನ್ನು ಮಂಗಳೂರು ಮಹಾನಗರಪಾಲಿಕೆಗೆ ವರ್ಗಾವಣೆ ಮಾಡಿ ಸೇರಿಸಿಕೊಳ್ಳಬೇಕೆಂದು ಬಯಕೆ. ಈ ಕುರಿತು ನಗರಾಭಿವೃದ್ಧಿ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಮಲ್ಲಾರಿಗೌಡ ಎಸ್.ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು):- ಮಾನ್ಯ ಅಧ್ಯಕ್ಷರೇ, ಈ ವಿಚಾರವನ್ನು ಮಾನ್ಯ ನಗರಾಭಿವೃದ್ಧಿ ಮಂತ್ರಿಗಳ ಗಮನಕ್ಕೆ ತಂದು ಅವರಿಂದ ಮಾನ್ಯ

ಸಜದಸ್ಯರಿಗೆ ಉತ್ತರವನ್ನು ಒದಗಿಸುವ ವ್ಯವಸ್ಥೆ ಮಾಡುತ್ತೇನೆ.

ವಿಷಯ:- ದಾಂಡೇಲಿಯ ವೆಸ್ಪ್ ಕೋಸ್ಪ್ ಪೇಪರ್ ಮಿಲ್ಲಿನಲ್ಲಿ ಉಂಟಾಗುವ ಜಲ ಹಾಗೂ ವಾಯು ಮಾಲಿನ್ಯದ ಬಗ್ಗೆ.

ಶ್ರೀ ಪ್ರಭಾಕರ್. ಎಸ್. ರಾಣೆ (ಕಾರವಾರ):- ಮಾನ್ಯ ಅಧ್ಯಕ್ಷರೇ, ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿ ವೆಸ್ಪ್ ಕೋಸ್ಪ್ ಪೇಪರ್ ಮಿಲ್ಲಿನ ನಿರುಪಯುಕ್ತ ಬೂದಿ(ಸಿಂದರ್)ಯನ್ನು ಲಾಭಕ್ಕಾಗಿ ಮಾರುವ ದೃಷ್ಟಿಯಿಂದ ದಾಸ್ತಾನು ಮಾಡುವುದು ವಾಡಿಕೆ. ಇದನ್ನು ಜನದಟ್ಟಣೆಯ ಸ್ಥಳವಾದ ಮತ್ತು ಸಾವಿರಾರು ವಿದ್ಯಾರ್ಥಿಗಳು ಕಲಿಯುತ್ತಿರುವ ಹಿಂದಿ ಹೈಸ್ಕೂಲ್ ಮತ್ತು ಜೂನಿಯರ್ ಕಾಲೇಜ್ ಆವರಣದ ಬಯಲಿನಲ್ಲಿ ದಾಸ್ತಾನು ಮಾಡಿದ್ದಾರೆ. ಈ ಮೈದಾನದ ಸುತ್ತಮುತ್ತಲೂ ನಿರ್ಮಲ್ ನಗರ, ಎಸ್‌ಆರ್‌ಟಿ, ಟಿಆರ್‌ಟಿ ಮತ್ತು ಜನತಾ ಕಾಲೋನಿ ಮುಂತಾದ ಜನನಿಭಿಡ ಪ್ರದೇಶವಾಗಿರುತ್ತದೆ. ಮೇಲ್ಕಾಣಿಸಿದ ಸಿಂದರ್ ಮೇಲಿನ ಬೂದಿಯನ್ನು ಗಾಳಿಗೆ ಹರಡಿ ಈ ಎಲ್ಲ ಜನರ ಮೂಗು ಗಂಟಲುಗಳಲ್ಲಿ ಹೋಗುತ್ತದೆ. ಇದರ ಸೇವನೆಯಿಂದ ಸೆಲ್‌ಮಾಸ್ಕಾನಿಸಿಸ್ ಎಂಬ ರೋಗವು ಬರುತ್ತದೆ. ಈ ರೋಗದಿಂದ ಕರುಳಿನ ಗಂಟೆಗೆ ಟಿ.ಬಿ. ಮತ್ತು ಕ್ಯಾನ್ಸರ್‌ಗಳು ಬರುತ್ತವೆ. ಆದ ಕಾರಣ ಕೂಡಲೇ ಈ ಬೂದಿಯನ್ನು (ಸಿಂದರ್) ದಾಸ್ತಾನನ್ನು ಊರ ಹೊರಗಡೆ ಮಾಡುವಂತೆ ಸಾರ್ವಜನಿಕರು ದೂರು ನೀಡಿದ್ದರೂ ಸಹ ಕಾರ್ಖಾನೆಯವರು ಬೂದಿಯನ್ನು ದೂರ ಸಾಗಿಸಲು ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ. ಈ ಕಾರ್ಖಾನೆಯಿಂದ ಜಲ ಹಾಗೂ ವಾಯು ಮಾಲಿನ್ಯ ವಿಪರೀತವಾಗಿ ಜನ ತೊಂದರೆ ಅನುಭವಿಸುತ್ತಿದ್ದಾರೆ. ಆದುದರಿಂದ ಸದರಿ ವಿಷಯವನ್ನು ಪರಿಸರ ಮಾಲಿನ್ಯ ಸಚಿವರ ಗಮನಕ್ಕೆ ತಂದು ಕೂಡಲೇ ಕ್ರಮ ತೆಗೆದುಕೊಳ್ಳುವಂತೆ ಕೋರುತ್ತೇನೆ.

(ಶ್ರೀ ಜಿ.ಎಸ್.ಶಿವನಂಜಪ್ಪನವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಬ್ಲೇಷಿಯಸ್ ಡಿಸೌಜ (ಕಾನೂನು ಸಚಿವರು):- ಮಾನ್ಯ ಅಧ್ಯಕ್ಷರೇ, ಮಾನ್ಯ ವಿಜ್ಞಾನ ತಂತ್ರಜ್ಞಾನ ಮತ್ತು ಜೀವಿ ಪರಿಸ್ಥಿತಿ ಶಾಸ್ತ್ರ ಮತ್ತು ಪರಿಸರ ಖಾತೆಯ ಸಚಿವರ ಪರವಾಗಿ ಈ ಹೇಳಿಕೆ ಮಾಡಲು ತಮ್ಮ ಅನುಮತಿ ಕೋರುತ್ತೇನೆ.

ಮೆ: ವೆಸ್ಪ್ ಕೋಸ್ಪ್ ಪೇಪರ್ ಮಿಲ್ಸ್, ಲಿ. ದಾಂಡೇಲಿ, ಉತ್ತರ ಕನ್ನಡ ಜಿಲ್ಲೆ ಈ ಕಾರ್ಖಾನೆಯು ಬಾಯ್ಲರ್‌ನಿಂದ ಹೊರ ಬರುವ ವ್ಯರ್ಥವಾದ ಬೂದಿಯನ್ನು ಜನವಸತಿ ಪ್ರದೇಶಗಳ ಮಧ್ಯೆ ಇರುವ ಆವರಣದ ಮೈದಾನದಲ್ಲಿ ಶೇಖರಿಸಿದ್ದಾರೆ. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಬೂದಿಯನ್ನು ಆ ಸ್ಥಳದಲ್ಲಿ ಶೇಖರಿಸಿರುವುದನ್ನು ಆಕ್ಷೇಪಿಸಿತು. ಇದರಿಂದಾಗಿ ಕಾರ್ಖಾನೆಯು ನಿರುಪಯೋಗಿ ಗಣಿಯಲ್ಲಿ ಈ ಬೂದಿಯನ್ನು ತುಂಬುವುದಕ್ಕಾಗಿ ಅನುಮತಿ ನೀಡಬೇಕೆಂದು ಸರ್ಕಾರವನ್ನು ಕೋರಿತ್ತು. ಕರ್ನಾಟಕ ರಾಜ್ಯ ಸರ್ಕಾರವು ಸರ್ಕಾರಿ ಆಜ್ಞೆ ಸಂಖ್ಯೆ: ಎ ಹೆಚ್ ಎಫ್ ಎಫ್: 31: ಎಫ್ ಎಫ್ ಎಂ 91, ಬೆಂಗಳೂರು, ದಿನಾಂಕ 13-9-91ರನ್ವಯ ಹಳಿಯಾಳ ವಿಭಾಗ, ವರ್ನಾಳಿ ರೇಂಜ್, ಪ್ರಧಾನ ಉಪವಿಭಾಗದ ಎಸ್ ಬಿ ಸಂಖ್ಯೆ 24ರಲ್ಲಿ ಇರುವ ನಿರುಪಯೋಗಿ ಗಣಿಯಲ್ಲಿ ವ್ಯರ್ಥವಾದ ಬೂದಿಯನ್ನು ತುಂಬಲು ಅನುಮತಿ ನೀಡಿದೆ. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಬೂದಿಯನ್ನು ಮೇಲೆ ತಿಳಿಸಿದ ನಿರುಪಯೋಗಿ ಗಣಿಯಲ್ಲಿ ತುಂಬಬೇಕೆಂದು ಆದೇಶಿಸಿದೆ. ಆದರೆ ಇದರ ಜೊತೆಗೆ ಜಲಮಾಲಿನ್ಯ ಕೂಡಾ ಕಂಡುಬಂದಿದ್ದು, ಈ ಎಲ್ಲಾ ವಿಷಯಗಳ ಬಗ್ಗೆ ವಿವರವಾಗಿ ಪರಿಶೀಲಿಸಲು ಏಪ್ರಿಲ್ ಮೊದಲನೇ ವಾರದಲ್ಲಿ ಖುದ್ದಾಗಿ ಅಲ್ಲಿಗೆ ಭೇಟಿ ನೀಡಲು ಉದ್ದೇಶಿಸಿದ್ದೇನೆ. ಕಾರ್ಖಾನೆಯು ಉತ್ಪತ್ತಿ ಮಾಡುವ ಅಗಾಧ ಜೈವಿಕ ಕೊಳೆಯನ್ನು ಹರಿಯುವ ನದಿಯಲ್ಲಿ ಪರಂಪರೆಯಾಗಿ ಬಿಟ್ಟು, ನದಿಯ ನೀರನ್ನು ಮಲಿನ ಮಾಡುವುದಲ್ಲದೆ, ಜೀವರಾಶಿಗಳಿಗೆ ಕುತ್ತನ್ನು ತರುವ ಪ್ರಯತ್ನವನ್ನು ಮಾಡಲಾಗುತ್ತಿದೆ. ಇದು ಅಪರಾಧವೇ ಸರಿ. ಪರಿಸರ ಮತ್ತು ಜಲ ಹಾಗೂ ವಾಯು ಮಾಲಿನ್ಯ ನಿಯಂತ್ರಣ ಕಾಯಿದೆ ಪ್ರಕಾರ ಕ್ರಮ ತೆಗೆದುಕೊಂಡು, ಕಾರ್ಖಾನೆಯ ಸ್ವಾಧೀನ ಹೊಂದಿರುವವರನ್ನು